ನರ್ತಿಸುತ್ತ ಮಾತುಗಳಾಗಿ ಹೊರ ಬರುತ್ತಿದ್ದವು. ಅದ್ಭುತ ನೆನಪಿನ ಶಕ್ತಿಯ ವ್ಯಕ್ತಿ ಎಂಬ ಹೊಗಳಿಕೆಗೂ ಪಾತ್ರನಾದವನು ಸತೀಶ.

ಆದರೆ ಆ ದಿನ ಟಿ.ವಿ.ಯ ಹೊಸ ಚಾನಲ್‌ನವರ ಸಂದರ್ಶನದ ದಿನ, ಶೂಟಿಂಗ್ ಆರಂಭಗೊಳ್ಳುತ್ತಿದ್ದಂತೆಯೇ ಈ ಅಗೋಚರ ಅಪರಿಚಿತ, ಸತೀಶನ ಮುಂದೆ ಹೊಸವೇಷ ಹಾಕಿ ನಿಂತು ಅಣಕಿಸಿದ್ದ. ಮುಖವಿಲ್ಲದ ನೆರಳಿನಂತೆ ಅತ್ತಿಂದಿತ್ತ ಓಡಾಡಿದ್ದ. ಸತೀಶನ ಕಣ್ಣು ಮನಸ್ಸುಗಳು ಸಂಪೂರ್ಣವಾಗಿ ಅವನತ್ತಲೇ ಹರಿದಾಡುವಂತಹ ಚಲನೆ ಅವನದು. ಚಾನಲ್‌ನವರ ಪ್ರಶ್ನೆಗೆ, ಸೂಕ್ತ ಉತ್ತರ ಕೊಡಲಾಗದಂತೆ ಸತೀಶನ ಮುಂದೆ ಸುಳಿದಾಡಿದ್ದ.

ಉತ್ತರವೇನು, ಮಾತೇ ಆಡಲಾಗದಂತೆ ಸತೀಶನ ಎಲ್ಲ ಗಮನವೂ ಈ ಕಳ್ಳನ ಕಡೆಗೇ ನೆಟ್ಟು ಕಿವಿ ಬಾಯಿಗಳೆರಡೂ ಸುಮ್ಮನೆ ತೆರೆದು ಕೂತಿದ್ದವು. ಮನೆಯೊಳಗಿನ ಕಳ್ಳನ ಕುಣಿತ, ವೇಷಭೂಷಣಗಳನ್ನು ನೋಡುತ್ತಾ, ಯೋಚಿಸುತ್ತಾ ಮಾತು ಮರೆತು ಬ್ಬೆಬ್ಬೆಬ್ಬೆ ಎಂದಿದ್ದವು. ಒಂದು ಮಾತನ್ನೂ ಸರಿಯಾಗಿ ಆಡಲಿಲ್ಲ, ಒಂದು ಉತ್ತರವನ್ನೂ ನೆಟ್ಟಗೆ ನೀಡಲಿಲ್ಲ ಎಂಬ ಸತ್ಯ ಸತೀಶನ ಗಮನಕ್ಕೆ ಬಂದಿದ್ದು, ಇತರರಿಗೆ ಕಾಣದಂತೆ ಮರೆಯಲ್ಲಿ ನಿಂತು ಕುಣಿದ ಆ ಅಗೋಚರ ವ್ಯಕ್ತಿ ಇದ್ದಕ್ಕಿದ್ದಂತೆ ಇಲ್ಲವಾದಾಗ. ಯಾರೂ ತನ್ನನ್ನು ನೋಡಲೇ ಇಲ್ಲವೆಂಬಂತೆ ಅವನು ಸದ್ದಿಲ್ಲದೆ ಸರಿದು ಹೋದಾಗ.

'ಇನ್ನೊಂದು ಟೇಕ್ ಮಾಡಿಕೊಳ್ಳಿ' ಎಂದು ವಿನಂತಿಸುವಂತಾಗಿತ್ತು ಸತೀಶನಿಗೆ. ಆದರೆ ಅದೇ ಪ್ರದೇಶದಲ್ಲಿದ್ದ, ಇನ್ನೊಬ್ಬ ನಟನ ಮನೆಗೆ ಹೀಗೆಯೇ ಸಂದರ್ಶನಕ್ಕಾಗಿ ಹೋಗಬೇಕಾಗಿದ್ದರಿಂದ ಕ್ಯಾಮರಾಮನ್‌ಗಾಗಲೀ, ಉಸ್ತುವಾರಿ ನಿರ್ದೇಶಕನಿಗಾಗಲೀ ಸಮಯವಿರಲಿಲ್ಲ. 'ಬಂದದ್ದು ಸಾಕು. ಚೆನ್ನಾಗಿಯೇ ಆಗಿದೆ' ಎಂದು ಸಮಾಧಾನಿಸಿ ಹೊರಟು ಹೋಗಿದ್ದರು ಬಂದವರು. ಅದು ಪ್ರಸಾರವಾದ ದಿನ, ನೋಡುಗರಿಗೆ ಏನು ಅನ್ನಿಸಿತೋ ಗೊತ್ತಿಲ್ಲ, ಆದರೆ ಸತೀಶನಿಗೆ ಮಾತ್ರ ತೀರ ಸಂಕೋಚವಾಗಿತ್ತು. ಅತೀವ ಬೇಸರವೂ ಆಗಿತ್ತು. ತನ್ನ ಉತ್ತರಗಳು ಒಬ್ಬ ಮೂರ್ಖನ ಉತ್ತರವಾಗಿ ಪ್ರಸಾರವಾಗುತ್ತಿದೆ ಎನಿಸಿ, ಮನೆಯಲ್ಲಿ ಒಬ್ಬಂಟಿಗನಾಗಿ ವೀಕ್ಷಿಸುತ್ತಿದ್ದರೂ ಲಕ್ಷಾಂತರ ಜನರ ಮುಂದೆ ಅವಮಾನವಾದ ಅನುಭವವಾಗಿತ್ತು. ಕುಳಿತಲ್ಲೇ ಅವಮಾನದಿಂದ ತೀರ ಕುಗ್ಗಿ ಹೋದಂತೆ, ಪ್ರೇಕ್ಷಕರ ತೆರೆದ ಹಲ್ಲು–ಬಾಯಿಗಳು ಸುತ್ತುವರಿದಂತಹ ಕಲ್ಪನೆಯಲ್ಲಿ ಕುಸಿದುಹೋಗಿತ್ತು ಅವನ ಮನಸ್ಸು.

ಕಲೋಪಾಸನೆಯಲ್ಲಿ ಸತೀಶನಿಗಿರುವ ತನ್ಮಯತೆಯನ್ನು, ಅವನದೇ ಆದ ನವನವೀನ ಶೈಲಿಗಳನ್ನು, ಕೆಲಸದಲ್ಲಿರುವ ಶ್ರದ್ಧೆ ಮತ್ತು ಪ್ರಾಮಾಣಿಕತೆಗಳನ್ನು, ಈಗೀಗ ಕೆಡಿಸುತ್ತಿರುವುದು ದೇಹಕ್ಕಾಗಿರುವ ವಯಸ್ಸೋ ಅಥವಾ ಆಸಕ್ತಿ ಕಳೆದುಕೊಳ್ಳುತ್ತಿರುವ ಮನಸ್ಸೋ? ಇಲ್ಲವೇ ತನ್ನ ಮನೆಯೊಳಗೆ ಸೇರಿಕೊಂಡಿರುವ ಅಗೋಚರ ಕಳ್ಳನೋ? ಸತೀಶನಿಗೆ ತಿಳಿಯಲಾಗದೇ ಅವಿಶ್ರಾಂತನಾದ. ಅದೆಷ್ಟು ಸಿನಿಮಾಗಳಲ್ಲಿ, ಮುಖ್ಯ ಪಾತ್ರಗಳಲ್ಲಿ ಮೆರೆದಿದ್ದಾನೆ. ಸೀರಿಯಲ್‌ಗಳಲ್ಲಿ ಅಭಿನಯದ ಮೂಲಕ ಜನಮನ ಗೆದ್ದಿದ್ದಾನೆ. ಕಾರ್ಯಕ್ರಮಗಳಲ್ಲಿ ಬುದ್ಧಿವಂತಿಕೆಯಿಂದ ನಡೆದುಕೊಂಡಿದ್ದಾನೆ. ಉತ್ತಮ ಚಿತ್ರಕಥೆಗಳನ್ನು ಹೆಣೆದು ಕೊಟ್ಟಿದ್ದಾನೆ. ನಾಟಕಗಳ ನಿರ್ದೇಶನದಲ್ಲಿ ಹೊಸ ಪದ್ಧತಿ ಕಂಡುಕೊಂಡಿದ್ದಾನೆ. ಹೊಸ ವಿಚಾರಗಳ ನೀರು ಹರಿಸಿದ್ದಾನೆ. ಆದರೆ, ಕುಟುಂಬದ ನೂರು ಸಿಕ್ಕು–ಸಮಸ್ಯೆಗಳಲ್ಲಿ ಸಿಲುಕಿಕೊಂಡು ಸ್ನೇಹಿತರಿಗೆ ಸಮಯ ನೀಡಲಾಗದೇ ಒಂಟಿಯಾಗಿ ಉಳಿದಿದ್ದಾನೆ. ಅವನಿಗೆ ಸ್ನೇಹಿತರು ನೂರಾರು ಇದ್ದಾರೆ. ಆದರೆ ಅಗತ್ಯ ಸಂದರ್ಭದಲ್ಲಿ ಧುತ್ತನೆ ಬಂದಿಳಿದು ಸಹಾಯಹಸ್ತ ಚಾಚುವಷ್ಟು ಆಪ್ತರು ಮಾತ್ರ ಯಾರೂ ಇಲ್ಲ. ಅವನ ಈ ಒಂಟಿತನವನ್ನು ಗಮನಿಸಿಯೇ ಕಳ್ಳನೊಬ್ಬ ಅವನ ಮನದ ಮನೆಯೊಳಗೆ ಸೇರಿಕೊಂಡಿದ್ದಾನೆ ಎಂಬುದು ಸತೀಶನ ಇತ್ತೀಚಿನ ಭಾವನೆ. ಆ ಅಗೋಚರನ ಬಗ್ಗೆ ಸತೀಶನಿಗೆ ಭಯವಿಲ್ಲ. ಆದರೆ ಕುತೂಹಲವಿದೆ. ಅವನ ಇರವು ಗಮನಕ್ಕೆ ಬಂದಿದೆಯಾದರೂ ಅವನ ಚಹರೆ ಕಾಣಲಾಗಿಲ್ಲ. ಕಂಡು ಮಾತಾಡಿಸುವ ಆಶಯವಿದೆ. ಕಳ್ಳನೆನಿಸಿದರೂ ಕದಿಯುವುದರ ಕುರಿತು ಆತಂಕವಿಲ್ಲ. ಆದರೆ ಅವನ ಬಗ್ಗೆ ಆಸಕ್ತಿ ಹುಟ್ಟಿದೆ.

ಯಾರವನು? ತನ್ನ ಹೆಸರು ಕೆಡಿಸಲು ಬಂದಿರುವನೇ? ಅದರಿಂದ ಅವನಿಗೇನು ಲಾಭ? ಎಂದು ಯೋಚಿಸುವಾಗಲೇ ಎಲ್ಲಿಂದಲೋ ಯಾರದೋ ಧ್ವನಿ ಕೇಳಿಸಿದಂತಾಗಿತ್ತು, 'ಕೆಡಿಸದಿದ್ದರೆ ನೀನು ನನ್ನ ಕಡೆ ನೋಡುತ್ತಿರಲಿಲ್ಲ'. ಸತೀಶ ಚಕಿತನಾದ. ತಾನು ಅವನ ಕಡೆ ನೋಡಬೇಕಾದರೂ ಯಾಕೆ? ನೋಡುವುದರಿಂದ ಅವನಿಗೇನು ಲಾಭ? ಉತ್ತರ ಸಿಗಲಿಲ್ಲ. ಹಠಾತ್ತನೆ ತನ್ನ ಮನೆಯಲ್ಲಿ ಕಾಣಿಸಿಕೊಳ್ಳುವ ಅವನು ಸದಾ ಇರುವ ಸ್ಥಳ ಯಾವುದು? ಕಳ್ಳನೇ ಖದೀಮನೇ ಸರ್ವ ಸಂಪನ್ನನೇ? ಕಳ್ಳನೆಂಬುದು ಸತೀಶ ಕೊಟ್ಟುಕೊಂಡಿರುವ ಹೆಸರಷ್ಟೆ. ಅವನ ರೂಪ, ಲಕ್ಷಣಗಳೇನು? ಇವೇ ಮುಂತಾಗಿ ಹುಟ್ಟಿದ ಪ್ರಶ್ನೆಗಳಿಗೆಲ್ಲ, ಅವನ ಪತ್ತೆಯೇ ಉತ್ತರ ಎನಿಸಿತು. ಅವನ ಶೋಧಕ್ಕೆ ಉಪಾಯಗಳನ್ನೂ, ಮಾರ್ಗಗಳನ್ನೂ ಹುಡುಕತೊಡಗಿದ ಸತೀಶ. ಅವನನ್ನು ಹುಡುಕುತ್ತ ಮನೆಯೆಲ್ಲಾ ತಡಕಾಡಿದ. ಏಕೆ ಕಾಡುತ್ತಿದ್ದಾನೆ ಹೀಗೆ, ಮನೆಯಲ್ಲಿ ಸದಾ ಒಂಟಿಯಾಗಿ ಇರುತ್ತೇನೆಂದೇ?

ತನ್ನದೇ ಮನೆಯೊಳಗೆ ತನಗೇ ಕಾಣದಂತೆ ಸಲ್ಲದ ಪಾರುಪತ್ಯ ನಡೆಸಲು ಆರಂಭಿಸಿದ ಅವನನ್ನು ಒಮ್ಮೆ ಎದುರಾಎದುರು ಹಿಡಿಯಬೇಕು. 'ನನ್ನ ಪರವಾಗಿ ಮಾತಾಡಲು ನಿನಗೆ ಅಧಿಕಾರ ಕೊಟ್ಟವರು ಯಾರು' ಎಂದು ಕೇಳಬೇಕು, 'ಹೇಗೆ ಎಲ್ಲಿಂದ ನುಸುಳಿ ಒಳಬಂದೆ, ಎಲ್ಲಿಂದ ಮಾತಾಡಿದೆ? ಇತರರಿಗೆ ಕಾಣದಂತೆ ಹೇಗೆ ಕುಣಿದೆ? ಹಾಕಿರುವ ವೇಷ ಎಲ್ಲಿ ಸಿಕ್ಕಿತು?' ಎಂಬುದನ್ನೆಲ್ಲ ಕೇಳಬೇಕು ಎಂದು ಮನದೊಳಗೆ ಲೆಕ್ಕಾಚಾರ ಹಾಕಿ, ರಹಸ್ಯವಾಗಿ ತನಿಖೆಗೆ ಇಳಿಯಬೇಕು ಎಂದುಕೊಂಡ ಸತೀಶ.

ಪ್ರಾಮಾಣಿಕ ಪ್ರಯತ್ನವೇ ಶೋಧನೆಗೆ ಮೊದಲ ಅಗತ್ಯ. ಆ ಅಗೋಚರ ಸಿಕ್ಕರೆ ಅವನನ್ನು ಎದುರಿಸಲು ಸನ್ನದ್ಧಗೊಂಡ ಸತೀಶ. ಕಾಲು ಮೇಲೆತ್ತಿ ಕೆನೆಯುವ ಕುದುರೆಯ ಉತ್ಸಾಹವನ್ನು ತನ್ನ ಈವರೆಗಿನ ಜೀವನದಲ್ಲಿ ತುಂಬಿಕೊಂಡಿದ್ದ ಸತೀಶನಿಗೆ ಇತ್ತೀಚಿನ ದಿನಗಳಲ್ಲೀಗ ಬರೀ ಆತಂಕ.

ನಿಜವೆಂದರೆ ಸತೀಶನಿಗೆ ಅವನು ಯಾರೆಂಬುದೇ ತಿಳಿಯದು. ಅಂಥವನು ಸದರದಿಂದ ನುಗ್ಗಿ ಎಂಥ ಕೆಲಸ ಮಾಡಿಬಿಟ್ಟನಲ್ಲ? ಛೆ. ಅವ್ಹೊತ್ತೇ ಏನು, ಆನಂತರವೂ ಕಣ್ಣಿಗೇ ಬೀಳದಿರುವ ಆತ ತನ್ನ ಹೆಸರು ಕೆಡಿಸಲೆಂದೇ ಥಟ್ಟನೆ ಬಂದು, ಬೇಡದ ಮಾತಾಡಿ ಓಡಿದನಲ್ಲ? ಅವನಿಗೆ ಸಿಕ್ಕಿದ್ದಾದರೂ ಏನು ಅದರಿಂದ? ತನ್ನ ಕೀರ್ತಿಗೆ ಮಸಿ ಬಳಿದ ತೃಪ್ತಿಯೇ? ಇನ್ನೊಬ್ಬರ ಬೀಳಿನಲ್ಲಿ ಸಿಗುವ ಆನಂದವೇ? ಅಸ್ಪಷ್ಟ ಆಕಾರದ ಆ ವ್ಯಕ್ತಿ, ಅವನೋ, ಅವಳೋ ಎಂಬುದೂ ಸ್ಪಷ್ಟವಾಗಿಲ್ಲ ಸತೀಶನಿಗೆ.

ಸತೀಶನಿಗೆ ಉಳಿದದ್ದು ಒಂದು ಸಣ್ಣ ಕೊರಗು ಮಾತ್ರ. ಅಂದು ವ್ಯವಸ್ಥೆಗೊಳಿಸಿದ ಕಾರ್ಯಕ್ರಮ ಸರಿ ಇರಲಿಲ್ಲವೆಂಬುದು ನಿಜವೇ ಆದರೂ, ಅದಕ್ಕಿರುವ ನಾನಾ ಕಾರಣಗಳನ್ನು ತಿಳಿಯ ಹೋಗದೇ ನಿಂದನೆಯ ಆ ಎರಡು ಪದಗಳನ್ನು, ಪ್ರೇಕ್ಷಕರ ಎದುರೇ ಹೇಳಿದ್ದು ಸರಿಯೇ? ಯಾಕೆ ಹಾಗೆ ಹೇಳಿ ತನ್ನ ಮೇಲೆ ಉಳಿದವರಿಗೆ ಒಂದು ಕೆಟ್ಟ ಭಾವನೆ ಬರುವಂತೆ ಮಾಡಿದ? ಆ ಅಗೋಚರ ಬಿತ್ತಿ ಹೋದ ಇಂಥದೊಂದು ಕೊರಗಿನ ಬೀಜ ಅಲ್ಲಲ್ಲಿ ಸಿಡಿದು, ಕುರುಚಲು ಕುರುಚಲಾಗಿ ಬೆಳೆದು ಮನೆಯ ಮೂಲೆಗಳಲ್ಲೆಲ್ಲ ಹರಡಿಕೊಳ್ಳತೊಡಗಿತ್ತು. ಅಂದಿನ ವೇದಿಕೆಯ ಮೇಲಿದ್ದ ಗಣ್ಯರ ಮನೆಯ ಅಂಗಳದ ತನಕ ಬೆಳೆದು, ಕ್ಷಮೆಯ ಹೂ ಹರಡಿಸಲು ಹವಣಿಸುತ್ತಿತ್ತು. ಅವುಗಳ ಜೊತೆ ಜೊತೆಗೇ ಸಣ್ಣದಾಗಿ ಚಿಗುರತೊಡಗಿದ್ದು ಜ್ಞಾನದ ಗಿಡ. ಅದೂ ಇಂಚಿಂಚೇ ಬೆಳೆದು, ಅಧ್ಯಯನದ ನೀರಿಲ್ಲದೇ, ಅರಿವಿನ ಗೊಬ್ಬರವಿಲ್ಲದೇ, ಕಾಂಡದಲ್ಲಿ ಗಂಟಾದಂತೆ ತಟಸ್ಥಗೊಳ್ಳುತ್ತಿತ್ತು.

ಹಾಗೆ ದೂರವಿದ್ದೂ ತನ್ನ ಬುದ್ಧಿ, ಮನಸ್ಸುಗಳ ಲಗಾಮನ್ನು ಹಿಡಿದು ಬಿಟ್ಟ ಅವನು ಯಾರು? ತನ್ನದೇ ಆ ಸಂದರ್ಭದಿಂದ, ಇನ್ನು ಮೇಲಾದರೂ ಅವನಿಗೆ ಸಲುಗೆ ಕೊಡಬಾರದು. ನಾನೇ ನೀನು, ನೀನೇ ನಾನು ಎಂಬ ಅವನ ನಡವಳಿಕೆಗೆ, ತಾನೇ ತಿಳಿ ಹೇಳಿ ಸರಿಯಾದ ಪಾಠ ಮಾಡಬೇಕು ಎಂದು ನಿರ್ಧರಿಸಿದ ಸತೀಶ, ತನ್ನ ಮನೆಯೊಳಗೆ ಸೇರಿದ ಆ ಕಳ್ಳನ ಹುಡುಕಾಟಕ್ಕೆ ಆರಂಭಿಸಿದ. ಅಂದವಾಗಿ ಅಲಂಕರಿಸಿ ಕಟ್ಟಿದ ತನ್ನ ಮಹಲಿನಂಥ ಮನೆಯಲ್ಲಿ; ಸಣ್ಣ ಪುಟ್ಟ ತರಕಾರಿ, ಸೊಪ್ಪುಗಳನ್ನು ಬೆಳೆದ ಹಿತ್ತಿಲಿನ ಚಿಕ್ಕ ತೋಟದಲ್ಲಿ; ವೇದ, ಪುರಾಣ, ಕಥೆ, ಕಾದಂಬರಿಗಳನ್ನು ಜೋಡಿಸಿದ ಗ್ರಂಥಾಲಯದಲ್ಲಿ; ಕೂಡಿಟ್ಟ ಪುಟ್ಟ ಹಣದ ಗಂಟಿನ ವಿವರಗಳಿರುವ ಬ್ಯಾಂಕ್‌ನ ಪಾಸ್ ಬುಕ್ಕಿನಲ್ಲಿ; ಮನೆಯ ಆಸ್ತಿಪಾಸ್ತಿಗಳ ದಾಖಲೆಯಲ್ಲಿ; ತಾನೇ ನಿಂತು ಕಟ್ಟಿಸಿದ ಮನೆಯ ಮೂಲೆ ಮೂಲೆಗಳಲ್ಲಿ; ಥಳಥಳಿಸುವ ಗೃಹಾಲಂಕಾರದ ವಸ್ತುಗಳಲ್ಲಿ, ಬಾಲ್ಯದಲ್ಲಿ ಕೇಳಿ, ನಂತರ ಓದಿ, ಯೌವನದಲ್ಲಿ ಮರೆತು, ನಡುವಯಸ್ಸಿನಲ್ಲಿ